NATIONAL DAIRY DEVELOPMENT BOARD

# ಜಾನುವಾರುಗಳಲ್ಲಿ ಕಾಣಿಸುವ ಪ್ರಮುಖ ರೋಗಗಳಿಗೆ ಪಾರಂಪರಿಕ ಪಶುವೈದ್ಯ ಔಷಧಿ/ ಮದ್ದು








INSTITUTE OF TRANSDISCIPLINARY HEALTH SCIENCES & TECHNOLOGY

# ಕೆಚ್ಚಲುಬಾವು (ಎಲ್ಲಾ ವಿಧಗಳು/ ರೀತಿ)


ಲೋಳೆಸರ




ಅರಿಶಿನ


ನಿಂಬೆಹಣ್ಣು


ಕರಿಬೇವು


ಬೆಲ್ಲ


ಸುಣ್ಣ

## ಬೇಕಾಗುವ ಪದಾರ್ಥಗಳು:

ಲೋಳೆಸರ-250 ಗ್ರಾಂ ; ಅರಿಶಿನ-50 ಗ್ರಾಂ ;

ಸುಣ್ಣ-15 ಗ್ರಾಂ ; ನಿಂಬೆಹಣ್ಣು-2; ಬೆಲ್ಲ-100 ಗ್ರಾಂ

## ತಯಾರಿಸುವ ವಿಧಾನ

1-3 ಪದರ್ಥಾಗಳನ್ನು ಕೆಂಪು ಪೇಸ್ಟಿನ ರೀತಿ ಚೆನ್ನಾಗಿ ರುಬ್ಬಿ

ನಿಂಬೆಹಣ್ಣುಗಳನ್ನು ಎರಡು ಹೋಳುಗಳನ್ನಾಗಿ ಕತ್ತರಿಸಿ

## ಔಷಧಿ ನೀಡುವ ಕ್ರಮ

ಒಂದು ಹಿಡಿ ಪೇಸ್ಟ್ ನ್ನು ತೆಗೆದುಕೊಂಡು ಅದಕ್ಕೆ 150-200 ಎಮ್ ಎಲ್ ನೀರನ್ನು ಬೆರೆಸಿ

ಕೆಚ್ಚಲನ್ನು ಚೆನ್ನಾಗಿ ತೊಳೆದು ಶುಚಿಮಾಡಿ ಕೆಂಪು ಮಿಶ್ರಣವನ್ನು ಕೆಚ್ಚಲಿನ ಎಲ್ಲಾ ಭಾಗಗಳಿಗೆ ಹಚ್ಚಿ

ಈ ವಿಧಾನವನ್ನು ಪ್ರತಿ ದಿನ 10 ಬಾರಿ ಐದು ದಿನಗಳವರೆಗೂ ಪುನರಾವರ್ತಿಸಿ

ದಿನಕ್ಕೆ 2 ನಿಂಬೆಹಣ್ಣುಗಳನ್ನು 3 ದಿನಗಳವರೆಗೂ ನೀಡಬೇಕು

**ಸೂಚನೆ:** ಹಾಲಿನಲ್ಲಿ ರಕ್ತಬರುತ್ತಿದ್ದರೆ, ಮೇಲಿನ ಮಿಶ್ರಣದ ಜೊತೆಗೆ, ಕರಿಬೇವು (2 ಹಿಡಿ) ಹಾಗೂ ಬೆಲ್ಲದ ಪೇಸ್ಟ್ ನ್ನು ದಿನಕ್ಕೆ ಎರಡು ಬಾರಿಯಂತೆ ರೋಗ ಗುಣವಾಗುವವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ

# ಮೊಲೆತೊಟ್ಟು ರಂಧ್ರಗಳ ಅವರೋಧಗಳು



ಬೇವಿನ ಎಲೆಯ ಕಡ್ಡಿ





ಅರಿಶಿನ

ಬೆಣ್ಣೆ



ಅಥವಾ



ತುಪ್ಪ

## ಬೇಕಾಗುವ ಪದಾರ್ಥಗಳು:

ತಾಜಾವಾಗಿ ಕಿತ್ತು ಶುಚಿ ಮಾಡಿರುವ ಬೇವಿನ ಎಲೆಯ ಕಡ್ಡಿ-1

ಅರಿಶಿನದ ಪುಡಿ; ಬೆಣ್ಣೆ ಅಥವಾ ತುಪ್ಪ

## ತಯಾರಿಸುವ ವಿಧಾನ

ಬೇವಿನ ಎಲೆಯ ಕಡ್ಡಿಯನ್ನು ಕೆಚ್ಚಲುತೊಟ್ಟಿನ ಅಳತೆಗೆ ಅನುಸಾರವಾಗಿ ಕತ್ತರಿಸಿಕೊಳ್ಳಿ

ಅರಿಶಿನ ಪುಡಿ, ಬೆಣ್ಣೆ ಅಥವಾ ತುಪ್ಪದ ಮಿಶ್ರಣವನ್ನು ಬೇವಿನ ಎಲೆಯ ಕಡ್ಡಿಗೆ ಚೆನ್ನಾಗಿ ಹಚ್ಚಿ

## ಔಷಧಿ ನೀಡುವ ಕ್ರಮ

ಮಿಶ್ರಣ ಲೇಪಿಸಿದ ಬೇವಿನ ಎಲೆಯ ಕಡ್ಡಿಯನ್ನು ಬಾಧಿತ ಕೆಚ್ಚಲ ತೊಟ್ಟಿನ ಒಳಗೆ ಅಪ್ರದಕ್ಷಿಣೆಯಾಕಾರದಲ್ಲಿ ಸೇರಿಸಿ

ಪ್ರತಿಬಾರಿ ಹಾಲುಕರೆದ ನಂತರ ಹೊಸ ಬೇವಿನ ಎಲೆಯ ಕಡ್ಡಿಯನ್ನು ಬಳಸಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕೆಚ್ಚಲು ಊತ



ಅಡಿಗೆ ಎಣ್ಣೆ





ಅರಿಶಿನ



ಬೆಳ್ಳುಳಿ

## ಬೇಕಾಗುವ ಪದಾರ್ಥಗಳು:

ಎಳ್ಳೆಣ್ಣೆ ಅಥವಾ ಸಾಸಿವೆ ಎಣ್ಣೆ- 200 ಎಮ್ ಎಲ್

ಅರಿಶಿಣದ ಪುಡಿ- ಒಂದು ಹಿಡಿ

ಬೆಳ್ಳುಳ್ಳಿ- 2 ಎಸಳು

## ತಯಾರಿಸುವ ವಿಧಾನ:

ಎಣ್ಣೆಯನ್ನು ಬಿಸಿಮಾಡಿ ಅದಕ್ಕೆ ಅರಿಶಿನದ ಪುಡಿ ಹಾಗೂ ಕತ್ತರಿಸಿದ ಬೆಳ್ಳುಳ್ಳಿಯನ್ನು ಹಾಕಿ ಚೆನ್ನಾಗಿ ಬೆರೆಸಿ, ಸ್ವಲ್ಪ ಘಮ ಬರುವವರೆಗೂ ಬಿಸಿಮಾಡಿ(ಕುದಿಸುವ ಅಣತ್ಯವಿಲ್ಲ) ತಣ್ಣಗಾಗಲು ಬಿಡಿ

## ಔಷಧಿ ನೀಡುವ ಕ್ರಮ:

ವೃತ್ತಾಕಾರದಲ್ಲಿ ಸಂಪೂರ್ಣ ಕೆಚ್ಚಲು ಭಾಗಕ್ಕೆ ಸ್ವಲ್ಪ ಬಲದೊಂದಿಗೆ ಹಚ್ಚಿ

ದಿನಕ್ಕೆ ನಾಲ್ಕು ಬಾರಿಯಂತೆ ಮೂರು ದಿನಗಳವರೆಗೂ ಹಚ್ಚಿ

## ಸೂಚನೆ:

ಈ ಮಿಶ್ರಣವನ್ನು ಲೇಪಿಸುವ ಮೊದಲ ಕೆಚ್ಚಲಬಾವು ಇದೆಯಾ ಎಂದು ಪರೀಕ್ಷಿಸಿ ಸಂಪೂರ್ಣವಾಗಿ ಗುಣಪಡಿಸಿಕೊಳ್ಳಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಸೆತ್ತೆ ಬೀಳದಿರುವುದು



ಮೂಲಂಗಿ





ಬೆಂಡೆಕಾಯಿ



ಬೆಲ್ಲ



ಉಪ್ಪು

## ಬೇಕಾಗುವ ಪದಾರ್ಥಗಳು:

ಬಿಳಿಮೂಲಂಗಿ- 1

ಬೆಂಡೆಕಾಯಿ- 1.5 ಕೆ. ಜಿ

ಬೆಲ್ಲ- ಸಾಕಾಗುವಷ್ಟು

ಉಪ್ಪು- ಸಾಕಾಗುವಷ್ಟು

## ತಯಾರಿಸುವ ವಿಧಾನ

ಬೆಂಡೆಕಾಯಿಗಳನ್ನು ಎರಡು ತುಂಡುಗಳನ್ನಾಗಿ ಕತ್ತರಿಸಿಕೊಳ್ಳಿ

## ಔಷಧಿ ನೀಡುವ ಕ್ರಮ

ಕರುಹಾಕಿದ 2 ಗಂಟೆಗಳ ಒಳಗೆ 1 ಮೂಲಂಗಿಯನ್ನು ತಿನ್ನಿಸಿ

ಕರುಹಾಕಿದ 8 ಗಂಟೆಗಳವರೆಗೂ ಸೆತ್ತೆ ಉಳಿದುಕೊಂಡಿದ್ದರೆ ಬೆಲ್ಲ ಹಾಗೂ ಉಪ್ಪಿನ ಜೊತೆ 1.5 ಕೆ.ಜಿ ಬೆಂಡೆಕಾಯಿಯನ್ನು ನೀಡಿ

ಸೆತ್ತೆ 12 ಗಂಟೆಯೊಳಗೆ ಬೀಳದಿದ್ದರೆ ಯೋನಿ ಮೂಲದಲ್ಲಿ ಒಂದು ಗಂಟನ್ನು ಹಾಕಿ 2 ಇಂಚಿನಷ್ಟು ಬಿಟ್ಟು ಕತ್ತರಿಸುವುದು ಅದು ತಾನಾಗಿ ಒಳಗೆ ಹೋಗುವುದು

ಕೈಯಿಂದ ಸೆತ್ತೆಯನ್ನು ತೆಗೆಯಲು ಪ್ರಯತ್ನಿಸಬೇಡಿ

ವಾರಕ್ಕೊಂದು ಮೂಲಂಗಿಯನ್ನು 4 ವಾರಗಳವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಬಂಜೆತನ / ಬೆದೆಗೆ ಬರದಿರುವುದು


ಮೂಲಂಗಿ


ಲೋಳೆಸರ




ಮಂಗರಬಳ್ಳಿ


ನುಗ್ಗೇ ಸೊಪ್ಪು


ಬೆಲ್ಲ


ಕರಿಬೇವು


ಉಪ್ಪು


ಅರಿಶಿನ

## ಔಷಧಿ ನೀಡುವ ಕ್ರಮ

ಬೆದೆಗೆ ಬಂದ ಒಂದು / ಎರಡು ದಿನಗಳಲ್ಲಿ ಚಿಕಿತ್ಸೆ ಪ್ರಾರಂಭಿಸಿ

ಇಲ್ಲಿ ಸೂಚಿಸಿರುವ ತಾಜಾ ಪದಾರ್ಥಗಳನ್ನು ಕೆಳಗೆ ನೀಡಿರುವಂತೆ ಅನುಕ್ರಮವಾಗಿ ದಿನಕ್ಕೊಮ್ಮೆ ಬೆಲ್ಲ ಹಾಗೂ ಉಪ್ಪಿನೊಂದಿಗೆ ನೀಡಿ

1 ಬಿಳಿ ಮೂಲಂಗಿಯನ್ನು ಪ್ರತಿದಿನ 5 ದಿನಗಳವರೆಗೂ ನೀಡಿ

1 ಲೋಳೆಸರದ ಸಂಪೂರ್ಣ ಎಲೆಯನ್ನು ಪ್ರತಿದಿನ 4 ದಿನಗಳವರೆಗೂ ನೀಡಿ

4 ಹಿಡಿ ನುಗ್ಗೇಸೊಪ್ಪನ್ನು ಪ್ರತಿದಿನ 4 ದಿನಗಳವರೆಗೂ ನೀಡಿ

4 ಹಿಡಿ ಮಂಗರಬಳ್ಳಿಯನ್ನು ಪ್ರತಿದಿನ 4 ದಿನಗಳವರೆಗೂ ನೀಡಿ

4 ಹಿಡಿ ಕರಿಬೇವನ್ನು ಅರಿಶಿನದ ಜೊತೆ ಪ್ರತಿದಿನ 4 ದಿನಗಳವರೆಗೂ ನೀಡಿ

ಜಾನುವಾರು ಗರ್ಭಧರಿಸದಿದ್ದರೆ ಮತ್ತೆ ಈ ಚಿಕಿತ್ಸೆಯನ್ನು ಪುನಾರಾವರ್ತಿಸಿ.

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಗರ್ಭಜಾರುವುದು



ಲೋಳೆಸರದ ತಿಳಿ





ಅರಿಶಿನ



ಮುಟ್ಟಿದರೆ ಮುನಿ ಗಿಡದ ಎಲೆಗಳು

## ಬೇಕಾಗುವ ಪದಾರ್ಥಗಳು:

ಲೋಳೆಸರದ ತಿಳಿ- ಒಂದು ಸಂಪೂರ್ಣ ಎಲೆ

ಅರಿಶಿನ- 1 ಚಿಟಕೆ

ಮುಟ್ಟಿದರೆ ಮುನಿ ಗಿಡದ ಎಲೆಗಳು- 2 ಹಿಡಿ

## ತಯಾರಿಸುವ ವಿಧಾನ

ಒಂದು ಸಂಪೂರ್ಣ ಲೋಳೆಸರದ ಎಲೆಯಿಂದ- ತಿಳಿಯನ್ನು ತೆಗೆದುಕೊಳ್ಳಿ

ಅದನ್ನು ಮತ್ತೆ ಮತ್ತೆ ಅಂಟು ಹೋಗಿ ತೆಳು ಜೆಲ್/ ತಿಳಿ ಸಿಗುವವರೆಗೂ ನೀರಿನಿಂದ ತೊಳೆಯಿರಿ

ಅದಕ್ಕೆ ಒಂದು ಚಿಟಕೆ ಅರಿಶಿನ ಹಾಕಿ ಮಿಶ್ರಣ ಒಂದರ ಅರ್ಧ ಭಾಗಕ್ಕೆ ಇಳಿಯುವವರೆಗೂ ಕುದಿಸಿ.

ಮುಟ್ಟಿದರೆ ಮುನಿ ಗಿಡದ ಎಲೆಯ ಪೇಸ್ಟ ತಯಾರಿಸಿಕೊಳ್ಳಿ

## ಔಷಧಿ ನೀಡುವ ಕ್ರಮ

ಜಾರಿರುವ ಗರ್ಭವನ್ನು ಸ್ವಚ್ಛಮಾಡಿ

ಜಾರಿರುವ ಗರ್ಭದ ಮೇಲೆ ಲೋಳೆಸರದ ತಿಳಿಯನ್ನು ಸಿಂಪಡಿಸಿ

ತಿಳಿ/ ಜೆಲ್ ಒಣಗಿದ ಮೇಲೆ ಮುಟ್ಟಿದರೆ ಮುನಿ ಗಿಡದ ಎಲೆಯ ಪೇಸ್ಟನ್ನು ಹಚ್ಚಿ

ಪರಿಸ್ಥಿತಿ ಸುಧಾರಿಸುವವರೆಗೂ ಪುನರಾವರ್ತಿಸಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕಾಲು-ಬಾಯಿ ರೋಗ- ಬಾಯಿ ಗಾಯಗಳು



ಜೀರಿಗೆ





ಮೆಣಸು



ಬೆಳ್ಳುಳ್ಳಿ



ಬೆಲ್ಲ



ಅರಿಶಿನ



ಮೆಂತ್ಯ



ತೆಂಗಿನ ಕಾಯಿ

## ಬೇಕಾಗುವ ಪದಾರ್ಥಗಳು:

ಜೀರಿಗೆ- 10 ಗ್ರಾಂ
ಮೆಂತ್ಯ- 10 ಗ್ರಾಂ
ಮೆಣಸು- 10 ಗ್ರಾಂ
ಅರಿಶಿನ- 10 ಗ್ರಾಂ
ಬೆಳ್ಳುಳ್ಳಿ-4 ಎಸಳು
ತೆಂಗಿನ ಕಾಯಿ-1
ಬೆಲ್ಲ- 120 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆ, ಮೆಂತ್ಯ ಮತ್ತು ಮೆಣಸನ್ನು ನೀರಿನಲ್ಲಿ 20-30 ನಿಮಿಷಗಳ ಕಾಲ ನೆನೆಸಿಡಿ
ಎಲ್ಲಾ ಪದಾರ್ಥಗಳನ್ನು ನುಣ್ಣನೆಯ ಪೇಸ್ಟಿನಂತೆ ರುಬ್ಬಿ
ಒಂದು ತೆಂಗಿನಕಾಯಿಯನ್ನು ತುರಿದು ಅದನ್ನು ಪೇಸ್ಟಿನ ಜೊತೆ ಚೆನ್ನಾಗಿ ಬೆರೆಸಿ
ಪ್ರತಿಬಾರಿ ತಾಜಾವಾಗಿ ತಯಾರಿಸಿ ಉಪಯೋಗಿಸಿ

## ಔಷಧಿ ನೀಡುವ ಕ್ರಮ

ಅದನ್ನು ಬಾಯಿ, ನಾಲಿಗೆ ಹಾಗೂ ಅಂಗುಳಕ್ಕೆ ಹಚ್ಚಿ
ಈ ಮಿಶ್ರಣವನ್ನು ದಿನಕ್ಕೆ ಮೂರುಬಾರಿಯಂತೆ 3-5 ದಿನಗಳವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕಾಲು-ಬಾಯಿ ರೋಗ- ಕಾಲು ಗಾಯಗಳು



ಕುಪ್ಪೀಗಿಡ





ಬೇವು



ಬೆಳ್ಳುಳ್ಳಿ



ಅರಿಶಿನ



ಕೊಬ್ಬರಿ ಎಣ್ಣೆ



ಎಳ್ಳೆಣ್ಣೆ



ಮೆಹಂದಿ



ತುಳಸಿ



ಸೀತಾಫಲ

## ಬೇಕಾಗುವ ಪದಾರ್ಥಗಳು:

ಕುಪ್ಪೀಗಿಡ- 1 ಹಿಡಿ

ಬೆಳ್ಳುಳ್ಳಿ- 10 ಎಸಳು

ಬೇವು- 1 ಹಿಡಿ

ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆ- 250 ಎಮ್ ಎಲ್

ಅರಿಶಿನ- 20 ಗ್ರಾಂ

ಮೆಹಂದಿ- 1 ಹಿಡಿ

ತುಳಸಿ- 1 ಹಿಡಿ

## ತಯಾರಿಸುವ ವಿಧಾನ

ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ರುಬ್ಬಿ

250 ಎಮ್ ಎಲ್ ಕೊಬ್ಬರಿ ಎಣ್ಣೆ/ ಎಳ್ಳೆಣ್ಣೆಯೊಂದಿಗೆ ಬೆರೆಸಿ ಕುದಿಸಿ ನಂತರ ತಣ್ಣಗಾಗಲು ಬಿಡಿ


## ಔಷಧಿ ನೀಡುವ ಕ್ರಮ

ಗಾಯವನ್ನು ಸ್ವಚ್ಛಮಾಡಿ ಕೈನಿಂದ / ಬಟ್ಟೆ/ ಬ್ಯಾಂಡೇಜ್ ಬಟ್ಟೆಯ ಸಹಾಯದಿಂದ ಹಚ್ಚಿ.

ಗಾಯದಲ್ಲಿ ಹುಳು/ ಕೀಟಗಳಿದ್ದರೆ ಸೀತಾಫಲದ ಎಲೆಯ ಪೇಸ್ಟ್‌ನ್ನು ಅಥವಾ ಕರ್ಪೂರ ಬೆರೆಸಿದ ಕೊಬ್ಬರಿ ಎಣ್ಣೆಯನ್ನು ಮೊದಲ ದಿನ ಹಚ್ಚಿ.

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಜ್ವರ




## ಬೇಕಾಗುವ ಪದಾರ್ಥಗಳು:

ಬೆಳ್ಳುಳ್ಳು- 2 ಎಸಳು; ಬೆಳ್ಳುಳ್ಳಿ- 2 ಎಸಳು; ಜೀರಿಗೆ- 10 ಗ್ರಾಂ;

ತುಳಸಿ- 1 ಹಿಡಿ; ಪಲಾವ್ ಎಲೆ/ ದಾಲ್ಚಿನಿ ಎಲೆ - 10 ಗ್ರಾಂ;

ಕಾಳುಮೆಣಸು-10 ಗ್ರಾಂ; ವೀಳ್ಯದೆಲೆ- 5; ಸಾಂಬರ್ ಈರುಳ್ಳಿ - 2;

ಅರಿಶಿನದ ಪುಡಿ- 10 ಗ್ರಾಂ; ಕಿರಾತ ಕಡ್ಡಿ/ ನೆಲಬೇವು- 20 ಗ್ರಾಂ;

ಕಾಮತುಳಸಿ- 1 ಹಿಡಿ; ಬೇವಿನೆಲೆ- 1 ಹಿಡಿ; ಬೆಲ್ಲ- 100 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆ, ಮೆಣಸು ಹಾಗೂ ಕೊತ್ತಂಬರಿ ಬೀಜಗಳನ್ನು 15 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿಡಿ ಮೇಲೆ ತಿಳಿಸಿದ ಎಲ್ಲಾ ಪದಾರ್ಥಗಳನ್ನು ನುಣ್ಣನೆಯ ಪೇಸ್ಟಿನಂತೆ ರುಬ್ಬಿ

## ಔಷಧಿ ನೀಡುವ ಕ್ರಮ

ಸ್ವಲ್ಪ ಮಿಶ್ರಣವನ್ನು ಬೆಳಗ್ಗೆ ಹಾಗೂ ಸಂಜೆ ಹಸುವಿನ ನಾಲಿಗೆಯ ಮೇಲೆ ತಿಕ್ಕುವುದು/ ತಿನ್ನಿಸುವುದು

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಅತಿಸಾರ / ಭೇದಿ




## ಬೇಕಾಗುವ ಪದಾರ್ಥಗಳು:

ಮೆಂತ್ಯ- 10 ಗ್ರಾಂ; ಈರುಳ್ಳಿ- 1; ಬೆಳ್ಳುಳ್ಳಿ- 1 ಎಸಳು;

ಜೀರಿಗೆ- 10 ಗ್ರಾಂ; ಅರಿಶಿನ- 10 ಗ್ರಾಂ; ಕರಿಬೇವು-1 ಹಿಡಿ

ಗಸಗಸೆ- 5 ಗ್ರಾಂ; ಮೆಣಸು- 10 ಗ್ರಾಂ; ಬೆಲ್ಲ- 100 ಗ್ರಾಂ; ಇಂಗು- 5 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆ, ಇಂಗು, ಗಸಗಸೆ , ಮೆಣಸು ಹಾಗೂ ಮೆಂತ್ಯವನ್ನು ಹೊಗೆ ಬರುವವರೆಗೂ (ಕಪ್ಪಾಗುವವರೆಗೆ) ಚೆನ್ನಾಗಿ ಹುರಿದುಕೊಳ್ಳಿ

ತಣ್ಣಗೆ ಮಾಡಿ ಪುಡಿ ಮಾಡಿಕೊಳ್ಳಿ

ಅದನ್ನು ಉಳಿದ ಪದಾರ್ಥಗಳ ಜೊತೆಗೆ ಪೇಸ್ಟಿನಂತೆ ರುಬ್ಬಿಕೊಳ್ಳಿ

## ಔಷಧಿ ನೀಡುವ ಕ್ರಮ

ಮಿಶ್ರಣವನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ

ಸಣ್ಣ ಪ್ರಮಾಣವನ್ನು ತೆಗೆದುಕೊಂಡು ದಿನಕ್ಕೆ 1 ಬಾರಿ

1-3 ದಿನಗಳವರೆಗೂ ಗುಣವಾಗುವವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಹೊಟ್ಟೆ ಉಬ್ಬರ ಹಾಗೂ ಅಜೀರ್ಣ


ಈರುಳ್ಳಿ


ಮೆಣಸು


ಬೆಳ್ಳುಳ್ಳಿ


ವೀಳ್ಯದೆಲೆ




ಕೆಂಪು ಒಣ ಮೆಣಸಿನಕಾಯಿ


ಶುಂಠಿ


ಜೀರಿಗೆ


ಅರಿಶಿನ


ಬೆಲ್ಲ


ಉಪ್ಪು

## ಬೇಕಾಗುವ ಪದಾರ್ಥಗಳು:

ಈರುಳ್ಳಿ- 100 ಗ್ರಾಂ; ಬೆಳ್ಳುಳ್ಳಿ- 10 ಎಸಳು; ಕೆಂಪು ಒಣ ಮೆಣಸಿನಕಾಯಿ - 2

ಜೀರಿಗೆ- 10 ಗ್ರಾಂ; ಅರಿಶಿನ- 10 ಗ್ರಾಂ; ಬೆಲ್ಲ- 100 ಗ್ರಾಂ

ಮೆಣಸು- 10 ಗ್ರಾಂ; ವೀಳ್ಯದೆಲೆ- 10; ಶುಂಠಿ- 100 ಗ್ರಾಂ

## ತಯಾರಿಸುವ ವಿಧಾನ

ಮೆಣಸು ಮತ್ತು ಜೀರಿಗೆಯನ್ನು 30 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿ

ಉಳಿದ ಎಲ್ಲಾ ಪದಾರ್ಥಗಳ ಜೊತೆ ನುಣ್ಣಗೆ ಪೇಸ್ಟಿನಂತೆ ರುಬ್ಬಿಕೊಳ್ಳಿ

## ಔಷಧಿ ನೀಡುವ ಕ್ರಮ

ಮಿಶ್ರಣವನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ

ಸಣ್ಣ ಪ್ರಮಾಣವನ್ನು ತೆಗೆದುಕೊಂಡು ಉಪ್ಪಿನ ಜೊತೆಗೆ ದಿನಕ್ಕೆ 3-4 ಬಾರಿ 3 ದಿನಗಳವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್.


ಕೋಡನ್ನು ಸ್ಕ್ಯಾನ್ ಮಾಡಿ

# ಜಂತುಹುಳುಗಳು / ಕೀಟಗಳು


ಈರುಳ್ಳಿ




ಮೆಣಸು


ಬೆಳ್ಳುಳ್ಳಿ


ಅರಿಶಿನ



ಸಾಸಿವೆ


ಬೇವು


ಜೀರಿಗೆ


ಬೆಲ್ಲ


ಬಾಳೆದಿಂಡು


ತುಂಬೆ


ಹಾಗಲಕಾಯಿ

## ಬೇಕಾಗುವ ಪದಾರ್ಥಗಳು:

ಈರುಳ್ಳಿ - 1; ಬೆಳ್ಳುಳ್ಳಿ - 5 ಎಸಳು; ಸಾಸಿವೆ – 10 ಗ್ರಾಂ

ಬೇವು – 1 ಹಿಡಿ; ಜೀರಿಗೆ – 10 ಗ್ರಾಂ; ಹಾಗಲಕಾಯಿ– 50 ಗ್ರಾಂ

ಅರಿಶಿನ– 5 ಗ್ರಾಂ; ಮೆಣಸು– 5 ಗ್ರಾಂ; ಬಾಳೆದಿಂಡು– 100 ಗ್ರಾಂ

ತುಂಬೆ– 1 ಹಿಡಿ; ಬೆಲ್ಲ- 100 ಗ್ರಾಂ

## ತಯಾರಿಸುವ ವಿಧಾನ

ಮೆಣಸು, ಜೀರಿಗೆ ಹಾಗೂ ಸಾಸಿವೆಯನ್ನು 30 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿ

ಉಳಿದ ಎಲ್ಲಾ ಪದಾರ್ಥಗಳ ಜೊತೆಗೆ ಪೇಸ್ಟಿನಂತೆ ರುಬ್ಬಿಕೊಳ್ಳಿ

## ಔಷಧಿ ನೀಡುವ ಕ್ರಮ

ಮಿಶ್ರಣವನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ

ಸಣ್ಣ ಪ್ರಮಾಣವನ್ನು ತೆಗೆದುಕೊಂಡು ಉಪ್ಪಿನ ಜೊತೆಗೆ ದಿನಕ್ಕೆ 1 ಬಾರಿ 3 ದಿನಗಳವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ

# ಉಣ್ಣೆಗಳು/ ಬಾಹ್ಯ ಪರಾವಲಂಬಿ ಜೀವಿಗಳು



ಬೆಳ್ಳುಳ್ಳಿ





ಅರಿಶಿನ



ಬೇವಿನೆಲೆ



ಲಂಟನಾ/ ಬೇಲಿ ಗಿಡ





ಬಜೆ



ಬೇವಿನ ಹಣ್ಣು



ತುಳಸಿ

## ಬೇಕಾಗುವ ಪದಾರ್ಥಗಳು:

ಬೆಳ್ಳುಳ್ಳಿ-10 ಎಸಳು; ಬೇವಿನೆಲೆ- 1 ಹಿಡಿ; ಬೇವಿನ ಹಣ್ಣು- 1 ಹಿಡಿ/ 10

ಬಜೆ- 10 ಗ್ರಾಂ; ಅರಿಶಿನದ ಪುಡಿ- 20 ಗ್ರಾಂ

ಲಂಟಾನ ಎಲೆಗಳು- 1 ಹಿಡಿ; ತುಳಸಿ- 1 ಹಿಡಿ

## ತಯಾರಿಸುವ ವಿಧಾನ

ಎಲ್ಲಾ ಪದಾರ್ಥಗಳನ್ನು ರುಬ್ಬಿ

ಒಂದು ಲೀಟರ್ ಶುದ್ಧನೀರನ್ನು ಬೆರೆಸಿ

ಕೋರಾ ಬಟ್ಟೆ ಅಥವಾ ಜರಡಿಯಿಂದ ಸೋಸಿಕೊಳ್ಳಿ

ಅದನ್ನು ಸಿಂಪಡಿಸುವ ಯಂತ್ರಕ್ಕೆ ಹಾಕಿಕೊಳ್ಳಿ

## ಔಷಧಿ ನೀಡುವ ಕ್ರಮ

ಜಾನುವಾರುವಿನ ಸಂಪೂರ್ಣ ದೇಹಕ್ಕೆ ಸಿಂಪಡಿಸಿ

ಕೊಟ್ಟಿಗೆಯಲ್ಲಿರುವ ಬಿರುಕುಗಳಿಗೂ ಸಿಂಪಡಿಸಿ

ಮಿಶ್ರಣದಲ್ಲಿ ಬಟ್ಟೆಯನ್ನು ಅದ್ದಿ ಸಹ ಜಾನುವಾರುವಿಗೆ ಲೇಪಿಸಬಹುದು

ವಾರಕ್ಕೊಮ್ಮೆ ಗುಣವಾಗುವವರೆಗೂ ಇದನ್ನು ಪುನರಾವರ್ತಿಸಿ

ಬಿಸಿಲಿರುವಾಗ ಮಾತ್ರ ಮಿಶ್ರಣವನ್ನು ಲೇಪಿಸಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಸಿಡುಬು / ವರ್ಟ್ / ಬಿರುಕುಗಳು


ಬೆಳ್ಳುಳ್ಳಿ





ಬೆಣ್ಣೆ


ಅರಿಶಿನ


ಬೇವು


ಜೀರಿಗೆ


ಕಾಮಕಸ್ತೂರಿ

## ಬೇಕಾಗುವ ಪದಾರ್ಥಗಳು:

ಬೆಳ್ಳುಳ್ಳಿ- 5 ಎಸಳು

ಅರಿಶಿನದ ಪುಡಿ- 10 ಗ್ರಾಂ

ಜೀರಿಗೆ- 15 ಗ್ರಾಂ

ಕಾಮಕಸ್ತೂರಿ- 1 ಹಿಡಿ

ಬೇವಿನೆಲೆ- 1 ಹಿಡಿ

ಬೆಣ್ಣೆ / ತುಪ್ಪ- 50 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆಯನ್ನು 15 ನಿಮಿಷ ನೀರಿನಲ್ಲಿ ನೆನೆಸಿಡಿ

ಎಲ್ಲಾ ಪದಾರ್ಥಗಳನ್ನು ನುಣ್ಣನೆಯ ಪೇಸ್ಟಿನ ಹದಕ್ಕೆ ರುಬ್ಬಿ

ಅದಕ್ಕೆ ಬೆಣ್ಣೆಯನ್ನು ಹಾಕಿ ಚೆನ್ನಾಗಿ ಬೆರೆಸಿ

## ಔಷಧಿ ನೀಡುವ ಕ್ರಮ

ಬಾಧಿತ ಪ್ರದೇಶಕ್ಕೆ ಎಷ್ಟು ಬಾರಿ ಸಾಧ್ಯವೋ ಅಷ್ಟು ಬಾರಿ ಗುಣವಾಗುವರೆಗೂ ಹಚ್ಚಿ

ಬಾಧಿತ ಪ್ರದೇಶವನ್ನು ಶುಚಿಮಾಡಿ ಒಣಗಿಸಿ ನಂತರ ಹಚ್ಚಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ



**National Dairy Development Board, Anand**
Phone: 02692-260148, 260149 • Fax: 02692-260157
Website: www.nddb.coop

*facebook.com/NationalDairyDevelopmentBoard*